ಇದೆ. ಈಗ ಎರಡು ವರ್ಷಗಳ ಹಿಂದೆ ಈ ಭರವಸೆಕೊಟ್ಟ ಮೇಲೆ ೫೦೦ ರೂಪಾಯಿ ಸಂಬಳದವರಿಗೆ ೮೦೦ ರೂಪಾಯಿಗಳಾಯಿತು ೬೦೦ ರೂಪಾಯಿ ಇದ್ದವರಿಗೆ ೯೦೦ ರೂಪಾಯಿಗಳೂ ಆದವು. ಹೀಗೆ ೩೦೦ ರೂಪಾಯಿ ಜಾಸ್ತಿಯಾಯಿತು. ಆದೇ ಸಂಬಳದಲ್ಲಿ ಅವರುಗಳು ಮುಂದುವರಿದುಕೊಂಡು ಬಂದಿರುತ್ತಾರೆ. ಅವರಲ್ಲಿ ಅನೇಕರು ಮದುವೆ ಮಾಡಿಕೊಂಡವರಿದ್ದು ಸಂಸಾರಸ್ಥರು ಇದ್ದಾರೆ. ಬೆಂಗಳೂರಿನಲ್ಲಿ ಇಷ್ಟೊಂದು ಕಡಿಮೆ ಸಂಬಳತೆಗೆದುಕೊಂಡು ದಿನಗಳೆಯುವುದಕ್ಕೆ ಸಾಧ್ಯವೆ ? ಆದುದರಿಂದ ಅವರಿಗೆ ಸಿ ಅಂಡ್ ಆರ್ ರೂಲ್ಸ್‌ನ್ನು ಯಾವಾಗ ಅಪ್ಲೈ ಮಾಡುತ್ತೀರಿ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಪ್ರಕಾರ ಅವರನ್ನು ಯಾವಾಗ ಖಾಯಂ ಗೊಳಿಸುತ್ತೀರಿ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕಂ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಬಗ್ಗೆ ಡ್ರಾಫ್ಟ್ ಸಿ ಅಂಡ್ ಆರ್ ರೂಲ್ಸ್ ಫೈನಲೈಸ್ ಆಗಿದೆ. ಅದು ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ಅದಾದಮೇಲೆ ಲೋಕಸೇವಾ ಆಯೋಗಕ್ಕೆ ಹೋಗಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು ಅದಾದ ನಂತರ ಕ್ಯಾಬಿನೆಟ್ ಮುಂದೆ ಬರಬೇಕು. ಅಲ್ಲಿ ಅಪ್ರೂವ್ ಆದಮೇಲೆ ೬೦ ಜನ ಕೋಡರ್ಸ್ ಮತ್ತು ೫೦ ಜನ ಜೂನಿಯರ್ ಆಪರೇಟರ್ಸ್ ಇನಿದ್ದಾರೆ ಅವರನ್ನು ನಿಯಮಾವಳಿಗಳಿಗನುಸಾರವಾಗಿ ಪರ್‌ಮನೆಂಟ್ ಮಾಡುತ್ತೇವೆ. ಅವರಿಗೆ ಸಿಗುತ್ತಿರುವ ಸಂಬಳ ಕಡಿಮೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪ್ರಾರಂಭದಲ್ಲಿ ಅವರಿಗೆ ೨೦–೨೫ ರೂಪಾಯಿಗಳ ದಿನಗೂಲಿ ಇತ್ತು ಅದರ ಮೇಲೆ ಅವರು ಕೆಲಸ ಮಾಡಿದ್ದಾರೆ. ಈಗ ಕೋಡರ್ಸ್ ೮೦೦ ರೂಪಾಯಿಗಳನ್ನು, ಆಪರೇಟರ್ಸ್ ೯೦೦ ರೂಪಾಯಿಗಳನ್ನು ಪಡೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಸದ್ಯದಲ್ಲಿಯೇ ಈ ಬಗೆಗಿನ ಕೆಲಸವನ್ನು ಪೂರ್ತಿಗೊಳಿಸುತ್ತೇವೆ.

ಶ್ರೀ ಹೆಚ್. ಎಂ. ರೇವಣ್ಣ.—ಅಂದಿನ ಮುಖ್ಯಮಂತ್ರಿಯವರು ಕೊಟ್ಟ ಭರವಸೆಯ ಇಂದಿನ ವರೆಗೂ ಪರಿಶೀಲನೆ ಮಾಡುತ್ತೇವೆ ಎಂದು ಮುಂದುವರಿಯುತ್ತಾ ಇದೆಯೇ ಹೊರತು ಕಾರ್ಯಗತ ವಾಗಿಲ್ಲ. ಈಗೆಲ್ಲಾ 'ಉದ್ಭವಿಸುವುದಿಲ್ಲ' ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಒಂದು ನಿರ್ದಿಷ್ಟ ಸಮಯವನ್ನು ನಿಗದಿ ಮಾಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಸಚಿವರು ಸೂಕ್ತ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ.

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತ.

೧೪೧೫. ಶ್ರೀ ಎಸ್. ರಮೇಶ್ (ಉತ್ತರಹಳ್ಳಿ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆಯೇ ?

(ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳು ?

(ಇ) ಈ ಬಗ್ಗೆ ಸರ್ಕಾರವು ಮಾಡಿರುವ ಪರ್ಯಾಯ ವ್ಯವಸ್ಥೆಗಳಾವುವು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತವನ್ನು ವಿಧಿಸಿಲ್ಲ.

(ಆ) ಮತ್ತು (ಇ) 'ಆ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಮೇಶ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂಬಾ ಆಶ್ಚರ್ಯಪಡುವಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಬೌರಿಂಗ್ ಆಸ್ಪತ್ರೆಯಲ್ಲಿ ರೋಗಿಯಾಗಿ ೨೬ ದಿವಸಗಳ ಕಾಲ ವಿಐಪಿ ವಾರ್ಡ್‌ನಲ್ಲಿ ಇದ್ದೆ. ಇಲ್ಲಿ ಆಪರೇಷನ್ ಮಾಡುವಂಥ ಕಾಲದಲ್ಲಿ ಏನಾದರೂ ಕರೆಂಟ್ ಹೋಗಿ ಬಿಟ್ಟಿತು ಅಂದರೆ ವಾರ್ಡ್‌ಬಾಯ್ ಓಡಿ ಹೋಗಿ ಜನರೇಟರ್‌ಗೆ ಹೇಳಿ ಬರಬೇಕು. ವಿಐಪಿ ವಾರ್ಡ್‌ನಲ್ಲಿಯೇ ಈ ರೀತಿ ಇರಬೇಕಾದರೆ ಇನ್ನು ಜನರಲ್ ವಾರ್ಡ್‌ಗಳ ಪರಿಸ್ಥಿತಿ ಹೇಗೆ ಇರಬಹುದು ಎಂದು ಊಹಿಸಿಕೊಳ್ಳಬೇಕಾಗುತ್ತದೆ. ನಾವು ಆ ವಾರ್ಡ್‌ಗಳಿಗೆ ಹೋದಾಗ ಅಲ್ಲಿ ಪೇಶೆಂಟ್ಸ್ ನಮ್ಮನ್ನು ಕುರಿತು ಹೇಳುತ್ತಾ ಇದ್ದರು, ರಾಜ್ಯದಲ್ಲಿ ಸರಕಾರ ಇದೆಯೋ ಇಲ್ಲವೋ ಎಂಬ ಬಗ್ಗೆ ಶಂಕೆ ವ್ಯಕ್ತಪಡಿಸುತ್ತಿದ್ದರು ಮತ್ತು ಹೊಸ ಸರಕಾರ ಬಂದ ಫೀಲಿಂಗ್ಸ್ ಕೂಡ ಆಗುತ್ತಾ ಇಲ್ಲ ಎಂಬ ಟೀಕೆ ಮಾಡುತ್ತಾ ಇದ್ದರು. ಬೌರಿಂಗ್ ಆಸ್ಪತ್ರೆಯಲ್ಲಿ ದಿನವೂ ಒಂದೆರಡು ಗಂಟೆಗಳ ಕಾಲ ಕರೆಂಟ್ ಹೋಗುತ್ತಾ

ಇರುತ್ತದೆ. ನಾಲ್ಕೈದು ಭಾಗಗಳಿಂದ ಕರೆಂಟ್ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು. ಆಲ್ಲಿ ಒಬ್ಬ ರೋಗಿಗೆ ಹೈ ಬಿಪಿ ಇದೆ, ಸರ್ಜರಿ ಆಗಿದೆ, ಆ ವಾರ್ಡ್‌ನಲ್ಲಿ ಕರೆಂಟ್ ಇರಲಿಲ್ಲ. ಮಾನ್ಯ ಸಚಿವರು ಕೊಟ್ಟ ಉತ್ತರವನ್ನು ನೋಡಿದರೆ, ಆಲ್ಲಿನ ಪರಿಸ್ಥಿತಿಯನ್ನು ನೋಡಿದವರಿಗೆ ಆಶ್ಚರ್ಯವಾಗುತ್ತದೆ. ಈ ವಿಚಾರಗಳು ತಮ್ಮ ಗಮನಕ್ಕೆ ಬಂದಿಲ್ಲವೆ ? ಆ ಆಸ್ಪತ್ರೆಗೆ ವಿದ್ಯುತ್ ಕಡಿತ ವಿಧಿಸಿಲ್ಲ ಎಂದು ಹೇಳಿದ್ದೀರಿ, ಅದು ನಿಜವೆ ?

ಶ್ರೀ ಎಸ್. ಎಂ. ಯೆಹ್ಯಾ.—ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳಿಗೆ, ನರ್ಸಿಂಗ್‌ಹೋಂಗಳಿಗೆ ಯಾವರೀತಿಯಲ್ಲೂ ಕರೆಂಟ್ ಕಟ್ ಮಾಡಬಾರದು ಎಂದು ೨೫-೪-೯೦ರಲ್ಲಿ ಆದೇಶವೊಂದನ್ನು ಹೊರಡಿಸಿದ್ದೇವೆ. ತಾವು ಹೇಳುವ ಬೌರಿಂಗ್ ಮಂತ್ತು ಲೇಡಿ ಕರ್ಜನ್ ಆಸ್ಪತ್ರೆಗೆ we have provided high tension loop cable to facilitate alternate power supply and to minimise interruption of power supply in case of failure of cable of one side. ಒಂದು ವೇಳೆ ಕೇಬಲ್ ಹೋದರೂ ಸಹ ಆಟೋಮೆಟಿಕ್ ಆಗಿ ತೊಂದರೆ ಯಾಗದ ಹಾಗೆ ಹೊಸ ಸಿಸ್ಟಂನ್ನು ಅಲ್ಲಿ ಪ್ರೊವೈಡ್ ಮಾಡಿದ್ದೇವೆ. ಅಲ್ಲಿ ಜನರೇಟರ್ ಕೂಡ ಇದೆ. ಅದನ್ನು ಕೂಡ ಎಮರ್‌ಜನ್ಸಿಯಲ್ಲಿ ಉಪಯೋಗ ಮಾಡಬಹುದು ಆ ಆಸ್ಪತ್ರೆಯವರೇ ಜನರೇಟರನ್ನು ಸಹ ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ತೀವ್ರ ಗಮನದಲ್ಲಿಟ್ಟು ಕೊಂಡು ಆಸ್ಪತ್ರೆಗಳಿಗೆ ಇಂಥ ತೊಂದರೆಗಳು ಆಗಬಾರದು, ಅದನ್ನು ಆದಷ್ಟೂ ಮಿನಿಮೈಸ್ ಮಾಡುವುದಕ್ಕೆ ನೋಡುತ್ತೇನೆ.

ಶ್ರೀ ಎಸ್. ರಮೇಶ್.—ಸಾರ್ಕ್ ಟೈಮ್‌ನಲ್ಲಿ ಬೌರಿಂಗ್ ಆಸ್ಪತ್ರೆ ರಿನೋವೇಟ್ ಮಾಡಿದರು ತಾವೂ ಆಸ್ಪತ್ರೆಗೆ ಬಂದಿದ್ದಿರಿ, ಆಗ ಎ. ಸಿ, ಕೆಲಸ ಮಾಡುತ್ತಿರಲಿಲ್ಲ, ಸೂಪರಿಂಟೆಂಡೆಂಟ್ ಮತ್ತು ಡಾಕ್ಟರ್ಸ್ ಒಳ್ಳೆಯವರಿದ್ದಾರೆ. ಆದರೆ ಕೆ ಇ ಬಿ ಯಾವ ರೀತಿ ಇದೆ ಎಂದರೆ, ಎ. ಸಿ, ಒಂದು ವಾರದಿಂದ ವರ್ಕ್ ಮಾಡುತ್ತಿಲ್ಲ, ಕೆ ಇ ಬಿ ಯವರಿಗೆ ಹೇಳಿದರೂ ನಿಗಾ ಕೊಟ್ಟಿಲ್ಲ. ಸಾರ್ಕ್ ಟೈಮ್‌ನಲ್ಲಿ ಕೊಟ್ಟಿದ್ದ ಒಂದು ಜನರೇಟರ್‌ನ್ನು ನಮಗೆ ನಿಮಗೆ ಬಳಸುತ್ತಾರೆಯೇ ವಿನಾ ಬಡವರಿಗಲ್ಲ, ಅಧಿಕಾರಿಗಳು ಹೇಳಿರುವುದು ಸುಳ್ಳು ಎಂದು ನಾನು ಸಾಬೀತು ಮಾಡುತ್ತೇನೆ. ಈಗಲೇ ಬನ್ನಿ. ಅಧ್ಯಕ್ಷರ ಜೊತೆ ಭೇಟಿ ಕೊಡೋಣ, ಸಾರ್ವಜನಿಕರು ಹೇಗೆ ಕುಂದುಕೊರತೆ ಅನುಭವಿಸುವರೆಂದು ನೋಡಿ, ವಿಧಾನಸೌಧದಲ್ಲಿ ಕುಳಿತು ಅಧಿಕಾರಿಗಳ ಉತ್ತರ ಸಂಬಿಕೊಂಡಿದ್ದೀರಿ. ನಾವು ನಿಮ್ಮ ಜೊತೆ ಇರುವುದರಿಂದ ಜಾಸ್ತಿ ಮಾತನಾಡದೆ ಇರುವ ಪರಿಸ್ಥಿತಿಯಲ್ಲಿದ್ದೇವೆ. ಇಲ್ಲದಿದ್ದರೆ ಬೇರೆ ರೀತಿ ಹೇಳಬೇಕಾಗಿರುತ್ತಿತ್ತು, ಸರಿಯಾದ ಉತ್ತರ ತಡಿಸಿಕೊಳ್ಳಿ. ಬೌರಿಂಗ್ ಆಸ್ಪತ್ರೆಯನ್ನು ಚೆನ್ನಾಗಿ ನೋಡಿಕೊಳ್ಳಿ.

ಶ್ರೀ ಎಸ್. ಎಂ. ಯಹ್ಯಾ.—ನಿಮ್ಮ ಕಂಪ್ಲೇಂಟನ್ನು ಖಂಡಿತ ಎನ್‌ಕ್ವೈರಿ ಮಾಡಿಸುತ್ತೇನೆ. ನನ್ನ ಉತ್ತರದಿಂದ ನಿಮಗೆ ತೃಪ್ತಿ ಆಗದೆ ಇರಬಹುದು, ಅದು ಬೇರೆ ಮಾತು. ಆದರೆ ಇದೆಲ್ಲ ಸುಳ್ಳು ಎಂದಿದ್ದೀರಿ, ಅದನ್ನು ನಂಬಲಿಕ್ಕೆ ನನಗೂ ಸಾಧ್ಯವಿಲ್ಲ. ನಮ್ಮ ಸಿಸ್ಟಮ್ ಪ್ರಕಾರ ನಾವು ವರ್ಕ್ ಮಾಡಬೇಕಾಗಿದೆ, ಸುಳ್ಳು ಕೊಟ್ಟು ಅವರಿಗೂ ಏನು ಪ್ರಯೋಜನವಿಲ್ಲ. ಆ ವೇಳೆ ಕೆಇಬಿಗೂ ಎಸಿ ವರ್ಕ್ ಮಾಡದಿರುವುದಕ್ಕೂ ಯಾವ ಸಂಬಂಧ ಇದೆ ಎಂದು ಗೊತ್ತಿಲ್ಲ. ಏನೇ ಆದರೂ ಮಾನ್ಯ ಸದಸ್ಯರು ದೂರಿರುವುದರ ಬಗ್ಗೆ ಪರ್ಸನಲ್ಲಾಗಿ ನಾನೇ ನಿಗಾ ಇಟ್ಟು ಇಂತಹ ತೊಂದರೆಗಳು ಆಗದ ಹಾಗೆ ನೋಡುತ್ತೇನೆ.

ಶ್ರೀ ಎಸ್. ರಮೇಶ್,—ಎಸಿಗೂ ಕೆಇಬಿಗೂ ಸಂಬಂಧ ಇಲ್ಲವೆಂದು ಹೇಳುತ್ತೀರಿ. ಸರ್ಕಾರಿ ಆಸ್ಪತ್ರೆಯಲ್ಲಿ ಏನಾದರೂ ಅವ್ಯವಸ್ಥೆ ಯಾದರೆ ಕನ್‌ಸರ್ನ್ಡ್ ಇಂಜಿನಿಯರ್‌ಗೆ ನೋಟ್ ಹಾಕುತ್ತಾರೆಯೇ ವಿನಾ ಆಸ್ಪತ್ರೆಯ ಸೂಪರಿಂಟೆಂಡೆಂಟೇ ರಿಪೇರಿ ಮಾಡಿಸುವ ಅವಕಾಶವಿಲ್ಲ. ಅಲ್ಲದೆ ನಾನು ಅಲ್ಲಿಗೆ ಹೋಗಿದ್ದಾಗ ಒಬ್ಬ ಬಿಪಿ ಪೇಶೆಂಟ್‌ಗೆ ಎಸಿ ಇಲ್ಲದಿದ್ದುದರಿಂದ ಹೊರಗೆ ವಾಕ್ ಮಾಡಲು ಕಳಿಸಿದ್ದರಂ. ಆತನ ಕೈಲಿ ನಡೆಯಲಾಗದೆ ಹಾರ್ಟ್ ಅಟಾಕ್ ಆಗುವುದೇನೋ ಎಂಬ ಭಯವಾಯಿತಂ. ಆದ್ದರಿಂದ ಖುದ್ದು ನೀವೇ ಹೋಗಿ ಏನು ತೊಂದರೆ ಇದೆ. ಎಂದು ಪರಿಶೀಲಿಸಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮತ್ತು ಮಾನ್ಯ ಸಚಿವರಿಬ್ಬರೂ ಸುಳ್ಳು ಎನ್ನುವ ಪದ ಬಳಸಿದ್ದೀರಿ, ಅದು ಅನ್‌ಪಾರ್ಲಿಮೆಂಟರಿ ಎಂದು ಹಿಂದಿನ ಅಧ್ಯಕ್ಷರು ತೀರ್ಮಾನ ಕೊಟ್ಟಿದ್ದಾರೆ. ಇಬ್ಬರೂ ಆ ಪದ ವಾಪಸ್ ತೆಗೆದುಕೊಳ್ಳುವುದಾದರೆ.....

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಬೌರಿಂಗ್ ಆಸ್ಪತ್ರೆಗೆ ಹೋಗಿದ್ದೆ, ಆಲ್ಲಿ ಕರೆಂಟ್ ಇರಲಿಲ್ಲ ಸ್ವಾಮಿ.

ಶ್ರೀ ಎಸ್. ಎಂ. ಯಹ್ಯ.—ನಿಮ್ಮಲ್ಲಿ ಯಾವುದೋ ಇರಲಿ, ಸತ್ಯ ಏನೆಂದು ಬಹಿರಂಗಕ್ಕೆ ಬರಬೇಕಲ್ಲ.

ಅಧ್ಯಕ್ಷರು.—ಬೌರಿಂಗ್ ಆಸ್ಪತ್ರೆಯಲ್ಲಿ ಸ್ಪೆಷಲ್ ಹೈಟೆನ್‌ಶನ್ ಕನೆಕ್ಷನ್ ಕೊಡಲಾಗಿದೆ ಎಂಬ ಹೊಸ ಸಿಸ್ಟಮ್ ಎಂದು, ತಾವು ಖುದ್ದಾಗಿ ಹೋಗುವುದಾಗಿ ಸಚಿವರು ಹೇಳಿರುವುದರಿಂದ.....

ಶ್ರೀ ಎಸ್. ರವೀಶ್.—ಇವರ ಆಫೀಸರ್ಸ್ ಒಂದು ರಿಪೋರ್ಟ್ ಹಾಕಿದ್ದಾರೆ, ಯಾವ ರೀತಿ ಮಾಡಿದರೆ ಸರಿಯಾಗುತ್ತದೆಂದು ಅದನ್ನೆಲ್ಲ ನಾನು ಹೇಳತೊಡಗಿದರೆ ಮತ್ತೆ ಕಡತದಿಂದ ತೆಗೆಯುವ ಪದ ಬಳಸಬೇಕಾಗುವುದು. ಆದ್ದರಿಂದ ಅವರು ಖುದ್ದಾಗಿ ಹೋಗಿ ಪರಿಶೀಲಿಸಲಿ.

SRI S. M. YAHYA.—I will certainly look into it.

ಶ್ರೀ ಟಿ. ಬಿ. ಜಯಚಂದ್ರ—ಪ್ರಶ್ನೆ ಸಂಖ್ಯೆ ೪೭೦

ಕರ್ನಾಟಕದಲ್ಲಿ ಗ್ರಾನೈಟ್ ಹೊರತೆಗೆಯುವ ಬಗ್ಗೆ

೧೪೧೯. ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ನಿರ್ವಹಿಸಿರುವ ದಾಖಲೆಗಳ ಪ್ರಕಾರ ಕಳೆದ ೫ ವರ್ಷಗಳಲ್ಲಿ ಕೆಂಪು ಅಥವಾ ಗುಲಾಬಿ, ಬೂದು ಮತ್ತು ಕಪ್ಪು ಶಿಲೆಗಳಂತಹ ಕಲ್ಲು ಗಣಿಗಳಿಂದ ಉತ್ಪಾದನಾ ಪ್ರಮಾಣ ಎಂತ? ಸರ್ಕಾರವು ಪಡೆದಿರುವ ರಾಜಧನ;

ಆ) ಮಂಗಳೂರು ಬಂದರಿನಲ್ಲಿ ನಿರ್ವಹಿಸಿರುವ ದಾಖಲೆಗಳಂತೆ ಕಾರ್ಖಾನೆಗಳ ಮುಖಾಂತರ ಸಿದ್ಧಪಡಿಸಿದ ಕಲ್ಲುಗಳನ್ನು ರಫ್ತು ಮಾಡಿರುವ ಪ್ರಮಾಣದ ವಿವರ,

ಇ) ಸರ್ಕಾರಕ್ಕೆ ರಫ್ತುದಾರರಿಂದ ರಾಜಧನ ಎಂಚಿತವಾಗುತ್ತಿರುವುದು ತಿಳಿದಿದೆಯೇ ?